KAUK910012262025



## <u>ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಸಿದ್ಧಾಪುರ</u>

**ಸಿ.ಸಿ ನಂ. 781/2025**

ಫಿರ್ಯಾದಿಃ ಸುರೇಶ ಕನ್ನ ನಾಯ್ಕು, 46 ವರ್ಷ, ರೈತಾಬಿ,
ವಾಸಃ ಅಳಗೋಡ, ಗುಂಜಗೋಡ ಪೊಸ್ಟ,
ಸಿದ್ಧಾಪುರ ತಾಲ್ಲೂಕು, ಉತ್ತರ ಕನ್ನಡ.

–ವಿರುದ್ಧ–

ಆರೋಪಿಃ ಕೆ ಪಿ ಮಹೇಶ್ವರ, ವಯಸ್ಸುಃ ಪ್ರಾಯಸ್ಥ,
ವ್ಯಾಪಾರಿ, ವಾಸಃ ಕಟ್ಟಿಗೆ ಹಳ್ಳ, ಪೋಸ್ಟಃ ಕಲ್ಮನೆ,
ತಾಲ್ಲೂಕುಃ ಶಿಕಾರಿಪುರ, ಜಿಲ್ಲೆಃ ಶಿವಮೊಗ್ಗ.

### <u>ಭಾರತೀಯ ನಾಗರೀಕಾ ಸುರಕ್ಷಾ ಸಂಹಿತೆ ಕಲಂ 351 ರಡಿ ಆರೋಪಿಯ ಹೇಳಿಕೆ</u>

**ಪ್ರಶ್ನೆಃ1** ನ್ಯಾಯಾಲಯದ ಮುಂದೆ ಅಭಿಯೋಜನೆಯ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀಯಾ?

**ಉತ್ತರಃ**

**ಪ್ರಶ್ನೆಃ** 2. **ಫ್ರಾಸಾ–1 ಸುರೇಶ ಕನ್ನ ನಾಯ್ಕು** ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ನ್ಯಾಯಾಲಯದ ವ್ಯಾಪ್ತಿಯಲ್ಲಿರುವ ಫಿರ್ಯಾದುದಾರರು ಶುಂಠಿ ಮತ್ತು ಜೋಳ ಬೆಳೆಯುವ ರೈತನಾಗಿದ್ದು, ಆರೋಪಿತನಾದ ನೀನು ರೈತರಿಂದ ಶುಂಠಿ ಮತ್ತು ಜೋಳವನ್ನು ಖರೀದಿಸಿ ವ್ಯವಹರಿಸುವ ವ್ಯಾಪಾರಸ್ಥನಾಗಿದ್ದು, ಪಿರ್ಯಾದುದಾರರು ಹಲವು ವರ್ಷಗಳಿಂದ ತನ್ನ ಜಮೀನಿನಲ್ಲಿ ಬೆಳೆಯುವ ಶುಂಠಿ ಮತ್ತು ಜೋಳವನ್ನು ಮಾರಾಟ ನಿನ್ನಲ್ಲಿ ಮಾಡುತ್ತ ಬಂದಿದ್ದು, ಈ ಸಂಬಂಧ ಆರೋಪಿತನಾದ ನೀನು ಪಿರ್ಯಾದುದಾರರಿಗೆ ಹಣವನ್ನು ನೀಡಬೇಕಾಗಿದ್ದು, ಅಲ್ಲದೇ ಆರೋಪಿತನಾದ ನೀನು ನಿನ್ನ ವ್ಯವಹಾರದಲ್ಲಿ ಹಣಕಾಸಿನ ಆವಶ್ಯಕತೆ ಇದ್ದಾಗ ಪಿರ್ಯಾದುದಾರರಿಂದ ಆಗಾಗ ಹಣವನ್ನು ಪಡೆದುಕೊಂಡಿದ್ದು, ಸದರಿ ನೀನು ಪಿರ್ಯಾದಿಗೆ ರೂಪಾಯಿ 6,00,000/– (ರೂಪಾಯಿ ಆರು ಲಕ್ಷಗಳು ಮಾತ್ರ) ಹಣವನ್ನು ನೀಡುವುದು ಬಾಕಿ ಇದ್ದು ಸದರಿ ಸಾಲದ

ಬಾಬ್ತಿಗಾಗಿ ನೀನು ಎರಡು ಚೆಕ್ಕುಗಳನ್ನು ನೀಡಿರುವುದಾಗಿ ಸಾಕ್ಷವನ್ನು ನುಡಿದಿರುತ್ತಾರೆ, ಇದಕ್ಕೆ ನೀನು ಏನು ಹೇಳುತ್ತೀಯಾ?

**ಉತ್ತರಃ–**

**ಪ್ರಶ್ನೆಃ 3 ಫ್ರಾಸಾಃ1** ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಸದರಿ ಸಾಲದ ಬಾಬ್ತಿಗಾಗಿ ದಿನಾಂಕ 04.11.2025 ರ ಡಿಸಿಬಿ ಬ್ಯಾಂಕ್, ಶಿವಮೊಗ್ಗ ಶಾಖೆಯ ಚೆಕ್ಕಿನ ಸಂಖ್ಯೆ 010260 ನ ರೂ. 3,00,000/– ನ ಚೆಕನ್ನು ಹಾಗೂ ದಿನಾಂಕ 04.11.2025 ರ ಡಿಸಿಬಿ ಬ್ಯಾಂಕ್, ಶಿವಮೊಗ್ಗ ಶಾಖೆಯ ಚೆಕ್ಕಿನ ಸಂಖ್ಯೆ 010261 ನ ರೂ. 3,00,000/– ನ ಚೆಕನ್ನು ನೀಡಿರುವುದಾಗಿ ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀನು ಏನು ಹೇಳುತ್ತೀಯಾ?

**ಉತ್ತರಃ–**

**ಪ್ರಶ್ನೆಃ 4. ಫ್ರಾಸಾಃ1** ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ತದನಂತರ ಫಿರ್ಯಾದುದಾರರು ಸದರಿ ಚೆಕನ್ನು ನಗದು ಗೊಳಿಸಲು ಕೆನರಾ ಡಿಸ್ಟ್ರೀಕ್ಟ ಸೆಂಟ್ರಲ್ ಬ್ಯಾಂಕ್, ಶಿರಸಿ ಶಾಖೆಗೆ ಹಾಕಿದಾಗ ನಿನ್ನ ಖಾತೆಯಲ್ಲಿ ಸಾಕಷ್ಟು ಹಣ ಇರದ ಕಾರಣ ದಿಃ 07.11.2025 ರಂದು "Funds Insufficient" ಎಂಬ ಹಿಂಬರಹದೊಂದಿಗೆ ವಾಪಸ್ ಬಂದಿರುವುದಾಗಿ ಮತ್ತು ಸದರಿ ವಿಷಯವನ್ನು ಅವರ ವಕೀಲರ ಮೂಲಕ ನೋಟಿಸ್ಸು ನೀಡಿ ತಿಳಿಸಿರುವುದಾಗಿ, ಸದರಿ ನೋಟಿಸ್ಸನ್ನು ನೀನು ಸ್ವೀಕರಿಸಿದ್ದರೂ ಸದರಿ ಹಣವನ್ನು ನೀನು ಮರುಪಾವತಿ ಮಾಡದೇ **ನೆಗೋಷ್ಯಬಲ್ ಇನ್ಸ್ಟುಮೆಂಟ ಆಕ್ಟ, 138** ರ ಅಡಿಯಲ್ಲಿ ಅಪರಾದ ಎಸುಗಿರುವಿರೆಂದು ನಿನ್ನ ಮೇಲೆ ಆರೋಪಣೆ ಇದೆ ಮತ್ತು ಸದ್ರಿ ಆರೋಪಣೆಯನ್ನು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀಯಾ ಎಂದು ಆರೋಪಿಸಲಾಗಿದೆ. ಇದಕ್ಕೆ ನೀನು ಏನು ಹೇಳುತ್ತೀಯಾ?

**ಉತ್ತರಃ–**

**ಪ್ರಶ್ನೆಃ 5. ಫ್ರಾಸಾಃ1** ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ತಾನು ಈ ಪ್ರಕರಣದಲ್ಲಿ ಪಿರ್ಯಾದಿಯಾಗಿದ್ದು ಈ ದಿನ ಸತ್ಯಾಪನಾ ಹೇಳಿಕೆಯ ಪ್ರಮಾಣ ಪತ್ರವನ್ನು ಪತ್ರ ರೂಪದಲ್ಲಿ ಹಾಜರುಪಡಿಸಿದ್ದೇನೆ. ಅದರಲ್ಲಿ ಹೇಳಿರುವ ಸಂಗತಿಗಳೆಲ್ಲವೂ ಸತ್ಯ ಮತ್ತು ಅದನ್ನು ತಾನೇ ತಮ್ಮ ವಕೀಲರಿಗೆ ಹೇಳಿ ಬರೆಸಿ, ಸಹಿ ಮಾಡಿರುತ್ತೇನೆ ಎಂದು, ದಿಃ 04–11–2025 ರ DCBಬ್ಯಾಂಕ್ ನ

ಚೆಕ್ ನಂ 010260 ನೀಡಿದ್ದು, ಸದರಿ ಚೆಕ್ ನ್ನು ನಿ.ಪಿ-1 ಎಂದು, ಸದರಿ ನಿ.ಪಿ-1 ರಲ್ಲಿರುವ ಆರೋಪಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ-1(ಎ) ಎಂದು, ಸದರಿ ನಿ.ಪಿ-1 ಚೆಕ್ ಅಮಾನ್ಯಗೊಂಡ ಬಗ್ಗೆ ಒಂದು ಬ್ಯಾಂಕ್ ಹಿಂಬರಹವನ್ನು ನಿ.ಪಿ-2 ಎಂದು, ದಿಃ 04-11-2025 ರ DCBಬ್ಯಾಂಕ್ ನ ಚೆಕ್ ನಂ 010261 ನೀಡಿದ್ದು, ಸದರಿ ಚೆಕ್ ನ್ನು ನಿ.ಪಿ-3 ಎಂದು, ಸದರಿ ನಿ.ಪಿ-3ರಲ್ಲಿರುವ ಆರೋಪಿಯ ಸಹಿಯನ್ನು ನಿ.ಪಿ-3(ಎ) ಎಂದು, ನಿ.ಪಿ-3 ಚೆಕ್ ಅಮಾನ್ಯಗೊಂಡ ಬಗ್ಗೆ ಒಂದು ಬ್ಯಾಂಕ್ ಹಿಂಬರಹವನ್ನು ನಿ.ಪಿ-4 ಎಂದು, ಸದರಿ ನಿ.ಪಿ-1 ಮತ್ತು 3 ಅಮಾನ್ಯಗೊಂಡ ಬಗ್ಗೆ ದಿಃ 20-11-2025 ರಂದು ಆರೋಪಿಗೆ ನೀಡಿದ ಲೀಗಲ್ ನೋಟೀಸ್ ನ ಕಚೇರಿ ಪ್ರತಿಯನ್ನು ನಿ.ಪಿ-5 ಎಂದು, ಒಂದು ಅಂಚೆ ರಶೀಧಿಯನ್ನು ನಿ.ಪಿ-6 ಎಂದು, ಸದರಿ ನಿ.ಪಿ-5 ನೋಟೀಸ ನೊಂದಾಯಿತ ಅಂಚೆ ಮೂಲಕ ಕಳುಹಿಸಿದ್ದು, ಸದರಿ ನೋಟೀಸ್ ಆರೋಪಿಗೆ ದಿಃ 22-11-2025 ರಂದು ಜಾರಿಯಾದ ಬಗ್ಗೆ ಅಂಚೆ ಸ್ವೀಕೃತಿ ಹಾಜರುಪಡಿಸಿರುತ್ತೇನೆ ಅದನ್ನು ನಿ.ಪಿ-7 ಎಂದು, ಕೆ ಡಿ ಸಿ ಸಿ ಬ್ಯಾಂಕ್ ಸಿದ್ದಾಪುರದಲ್ಲಿರುವ ತನ್ನ ಖಾತೆಯ Statement of accounts ಹಾಜರುಪಡಿಸಿದ್ದು ಅದನ್ನು ನಿ.ಪಿ-8 ಎಂದು ಗುರುತಿಸಿ ಸಾಕ್ಷ್ಯವನ್ನು ನುಡಿದಿರುತ್ತಾರೆ, ಇದಕ್ಕೆ ನೀನು ಏನು ಹೇಳುತ್ತೀಯಾ?

**ಉತ್ತರಃ-**

**ಪ್ರಶ್ನೆಃ 6** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ-1 ಚೆಕ್ಕಿನ ನಂ 010260 ಮತ್ತು ನಿಪಿ-3 ಚೆಕ್ಕಿನ ನಂ 010261 ನಿಮ್ಮ ಡಿಸಿಬಿ ಖಾತಾ ನಂ. 22222900001526 ಖಾತೆಗೆ ಸಂಬಂಧಿಸಿದ ಚೆಕ್ ಆಗಿರುತ್ತದೆ ಎಂಬುದನ್ನು ಓಪ್ಪಿಕೊಳ್ಳುವಿರಾ?

**ಉತ್ತರಃ**

**ಪ್ರಶ್ನೆಃ 7** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ-1 ಚೆಕ್ಕಿನ ನಂ 010260 ಮತ್ತು ನಿಪಿ-3 ಚೆಕ್ಕಿನ ನಂ 010261 ಮೇಲಿನ ಸಹಿ ನಿಮ್ಮದೇ ಎಂದು ಓಪ್ಪಿಕೊಳ್ಳುವಿರಾ?

**ಉತ್ತರಃ**

**ಪ್ರಶ್ನೆಃ 8** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ-1 ಚೆಕ್ಕಿನ ನಂ 010260 ಮತ್ತು ನಿಪಿ-3 ಚೆಕ್ಕಿನ ನಂ 010261 ಗಳನ್ನು ಪಿರ್ಯಾದುದಾರರಿಗೆ ನೀಡಿರುವುದಾಗಿ ನೀವು ಓಪ್ಪಿಕೊಳ್ಳುವಿರಾ?

**ಉತ್ತರಃ**

**ಪ್ರಶ್ನೆಃ 9** ಪಿರ್ಯಾದುದಾರರಿಂದ ರೂ.6,00,000/- ಮೌಲ್ಯದ ಶುಂಠಿ ಮತ್ತು ಜೋಳ ಗಳನ್ನು ಕೊಂಡಿರುವಿರಾ?

**ಉತ್ತರಃ**

**ಪ್ರಶ್ನೆಃ 10** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ-1 ಚೆಕ್ಕಿನ ನಂ 010260 ಮತ್ತು ನಿಪಿ-3 ಚೆಕ್ಕಿನ ನಂ 010261 ದಿನಾಂಕ 04.11.2025 ರಲ್ಲಿ ನಮೂದಿಸಿದ ರೂ.6,00,000/- ನ್ನು (ಆರು ಲಕ್ಷ ರೂಪಾಯಿಗಳು ಮಾತ್ರ) ಪಿರ್ಯಾದುದಾರರಿಗೆ ಪಾವತಿ ಮಾಡುವ ಭಾಧ್ಯತೆಯನ್ನು ನೀವು ಒಪ್ಪಿಕೊಳ್ಳುವಿರಾ?

**ಉತ್ತರಃ**

ಪ್ರಶ್ನೆಃ **11** ಈ ಹಂತದಲ್ಲಿ ಈ ಪ್ರಕರಣವನ್ನು ರಾಜೀ ಮಾಡಿಕೊಳ್ಳಲು ಇಚ್ಚಿಸುವಿರಾ?

**ಉತ್ತರಃ**

ಪ್ರಶ್ನೆಃ **12**. ಈ ಪ್ರಕರಣದಲ್ಲಿ ನಿನಗೆ ಇನ್ನು ಏನಾದರೂ ಹೇಳುವುದು ಇದೆಯೇ ?

**ಉತ್ತರಃ**

ಪ್ರಶ್ನೆಃ **13**. ನಿನ್ನ ಪರವಾಗಿ ಏನಾದರೂ ಸಾಕ್ಷಿ ಅಥವಾ ದಾಖಲೆಗಳನ್ನು ಹಾಜರುಪಡಿಸುವಿರಾ?

**ಉತ್ತರಃ**

ಫಿರ್ಯಾದುದಾರರ ಪರ ಸಾಕ್ಷಿದಾರರ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕಃ **29-01-2026** ರಂದು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ಸಿದ್ದಾಪುರ.**